ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ , ಪುತ್ತೂರು, ದ.ಕ.

**ಸಿ.ಸಿ.ನಂಬ್ರ.615/2022**

ಪಿರ್ಯಾದಿ : ಕೆ ವಿಶ್ವನಾಥ ನಾಯಕ

– ಮತ್ತು –

ಆರೋಪಿ : ಬಿ ಪ್ರಶಾಂತ್ ಕುಮಾರ್

| | | |
|---|---|---|
| ಆರೋಪಿಯ ಹೆಸರು | : | ಬಿ ಪ್ರಶಾಂತ್ ಕುಮಾರ್ |
| ತಂದೆಯ ಹೆಸರು | : | ಅಹಮ್ಮದ್ ರಫೀಕ್ |
| ವಯಸ್ಸು | : | 42 ವರ್ಷ |
| ವಾಸ್ತವ್ಯ | : | ಅನೆಮಜಲು ಬಣ್ಣೂರು ಗ್ರಾಮ ಮತ್ತು ಅಂಚೆ, ಪುತ್ತೂರು ತಾಲೂಕು, ದ.ಕ |
| ದಿನಾಂಕ | : | 16-03-2023 |

**ದಂಡ ಪ್ರಕ್ರಿಯ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆಃ**

| | |
|---|---|
| ಪ್ರಶ್ನೆ ನಂ.1<br>ಉತ್ತರಃ | ನೀವು ಪಿರ್ಯಾದುದಾರರು ಮಂಡಿಸಿದ ಸಾಕ್ಷ್ಯವನ್ನು ಕೇಳಿರುವಿರಲ್ಲವೇ ? |
| ಪ್ರಶ್ನೆ ನಂ.2<br>ಉತ್ತರಃ | ಫ್ರಾ.ಸಾ.1ರವರಾದ ಕೆ ವಿಶ್ವನಾಥ ನಾಯಕ ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಫ್ರಾಸಾ-1 ರವರ ಹತ್ತಿರ ರೂ. 2,50,000/- ಸಾಲವನ್ನು ಪಡೆದಿದ್ದು ನಂತರ ನೀವು ಕಾರ್ಪೊರೇಷನ್ ಬ್ಯಾಂಕ್, ಪುತ್ತೂರು ಶಾಖೆಗೆ ಚೆಕ್ ನಂಬ್ರ 136459 ಪೋಸ್ಟ ಡೇಟಡ್ ದಿನಾಂಕ 21-10-2022 ರಂದು ನೀಡಿ ನಂತರ ದಿನಾಂಕ 21-01-2022 ರಂದು ಅಥವಾ ನಂತರದ ಯಾವುದೇ ದಿನಾಂಕದಂದು ಚೆಕ್ ಅನ್ನು ಹಾಜರುಪಡಿಸುವಂತೆ ನೀವು ಫ್ರಾಸಾ-1 ರವರಿಗೆ ವಿನಂತಿಸಿದ್ದು, ಸದರಿ ಖಾತೆಯಲ್ಲಿ ಸಾಕಷ್ಟು ಹಣ ಇದೆ ಎಂದು ನಂಬಿಸಿ ಕೊಟ್ಟಿದ್ದಿರಿ ಎಂದು ಅವರ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಪ್ರಶ್ನೆ ನಂ.3 | ಫ್ರಾ.ಸಾ.1 ನೇಯವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಮ್ಮ ಭರವಸೆಯ ಮಾತುಗಳನ್ನು ಅವರು ನಂಬಿ ಸದರಿ ನಿಪಿ-1 ಚೆಕ್ಕನ್ನು ತನ್ನ ಬ್ಯಾಂಕಾದ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಪುತ್ತೂರು ಶಾಖೆಗೆ ಹಾಜರುಪಡಿಸಿದಾಗ, ನಿಮ್ಮ ಸಹಿಯು ವಿಭಿನ್ನವಾಗಿದೆ |

| | |
|---|---|
| | ಎಂಬ ಕಾರಣಕ್ಕೆ ನಿಪಿ-1 ಚೆಕ್ ಅಮಾನ್ಯಗೊಂಡಿದ್ದು, ಈ ಬಗ್ಗೆ ನಿಪಿ-2 ರಂತೆ "**Signature differs**" ಎಂಬ ಹಿಂಬರಹವನ್ನು ದಿನಾಂಕ 21-01-2022 ರಂದು ನೀಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಉತ್ತರಃ | |
| ಪ್ರಶ್ನೆ ನಂ.4<br><br>ಉತ್ತರಃ | ಫ್ರಾ.ಸಾ.1 ನೇಯವರು ತಮ್ಮ ಸಾಕ್ಷ್ಯದಲ್ಲಿ ಚೆಕ್ ಅಮಾನ್ಯವಾದ ಕುರಿತು ದಿನಾಂಕ 22-02-2022 ರಂದು ನಿಪಿ-3 ರಂತೆ ಫ್ರಾ.ಸಾ.1 ನೇಯವರು ತನ್ನ ವಕೀಲರ ಮೂಲಕ ನಿಮಗೆ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸು ದಿನಾಂಕ 07-03-2022 ರಂದು ನಿಪಿ-4 ರಂತೆ ನೀವು ಸ್ವೀಕರಿಸಿರುತ್ತೀರಿ ಹಾಗೂ ನೀವು ಯಾವುದೇ ಪ್ರತ್ಯುತ್ತರ ನೋಟೀಸನ್ನು ನೀಡಿಲ್ಲ ಹಾಗೂ ಮೇಲೆ ಹೇಳಿದ ಹಣವನ್ನು ಫ್ರಾ.ಸಾ.1 ನೇಯವರಿಗೆ ಪಾವತಿಸಿಲ್ಲ ಎಂದು ಅವರು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಪ್ರಶ್ನೆ ನಂ.5<br><br>ಉತ್ತರಃ | ಫ್ರಾ.ಸಾ.1 ನೇಯವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು, ನಿಮ್ಮ ಸಹಿಯು ವಿಭಿನ್ನವಾಗಿದೆ ಎಂದು ನಿಮಗೆ ತಿಳಿದಿದ್ದರೂ ಕೂಡ ನೀವು ಯಾವುದೇ ವ್ಯವಸ್ಥೆ ಮಾಡದೇ ದುರುದ್ದೇಶಪೂರ್ವಕವಾಗಿ ನಿಪಿ-1 ಚೆಕ್ಕನ್ನು ಫ್ರಾ.ಸಾ.1 ನೇಯವರಿಗೆ ನೀಡಿ ಅದು ಅಮಾನ್ಯಗೊಂಡ ಆರೋಪವು ನೆಗೋಶೈಬಲ್ ಇನ್ಸ್ಟುಮೆಂಟ್ ಆಕ್ಟ್ ನ ಸೆಕ್ಷನ್ 138 ರಡಿಯಲ್ಲಿ ಮತ್ತು ಭಾರತೀಯ ದಂಡ ಸಂಹಿತೆ ಕಾಯಿದೆಯಡಿಯಲ್ಲಿ ನೀವು ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಪ್ರಶ್ನೆ ನಂ.6<br><br>ಉತ್ತರಃ | ಫ್ರಾ.ಸಾ.1 ನೇಯವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ಫ್ರಾ.ಸಾ.1 ನೇಯವರು ನೀಡಿದ ದೂರಿನನ್ವಯ ನ್ಯಾಯದ ಹಿತದೃಷ್ಟಿಯಿಂದ ಮತ್ತು ಕಾನೂನಿನ ದೃಷ್ಟಿಯಿಂದ ನಿಮ್ಮನ್ನು ವಿಚಾರಣೆಗೊಳಪಡಿಸಿ, ನಿಮಗೆ ಶಿಕ್ಷೆಯನ್ನು ವಿಧಿಸಬೇಕೆಂದು ಹಾಗೂ ಅವರಿಗೆ ಪರಿಹಾರವನ್ನು ದೊರಕಿಸಿಕೊಡಬೇಕೆಂದು ಸಾಕ್ಷ್ಯ ನುಡಿದಿದ್ದು ತಮ್ಮ ಪರ ನಿಪಿ-1 ರಿಂದ 5 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ? |
| ಪ್ರಶ್ನೆ ನಂ.7 | ಈ ಬಗ್ಗೆ ನೀವೇನಾದರೂ ಹೆಚ್ಚಿಗೆ ಹೇಳುವುದಿದೆಯಾ ? |

| | |
|---|---|
| ಉತ್ತರಃ | |
| ಪ್ರಶ್ನೆ ನಂ.8<br>ಉತ್ತರಃ | ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯಾ ? |

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಅವನು ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಸಂಪೂರ್ಣ ಮತ್ತು ಸತ್ಯವಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ಪುತ್ತೂರು, ದ.ಕ.